# ನಾಳಿನ್ ಕತಿ ನಾರಾಯ್ಣ್ ಬಲ್ಲಾ

ಬೆಂಕಿಯು ಹಾಗೆ ಉರಿಯುವ ನೋವನ್ನು ಹೊಟ್ಟೆಯೊಳಗೆ ಅಡಗಿಸಿಟ್ಟರೂ, ತಂಪಾದ ನಗು ತುಟಿಗಳಿಗೆ ಲೇಪಿಸಿಕೊಂಡರೂ ಕೋವಿಡ್‌ನ ಭಯದ ಭೂತಕ್ಕೆ ಜನಮಾನಸ ತಬ್ಬಿಬ್ಬಾಗಿದೆ. ಒಂದು, ಎರಡನೇ ಅಲೆಯಲ್ಲಿ ಹೈರಾಣಾಗುತ್ತಿದ್ದರೂ ಮೂರನೇ ಅಲೆ ಎದುರಿಸಬೇಕಾಗುವುದು ಕೂಡಾ ಅನಿವಾರ್ಯವಾಗಿದೆ. ಸವಾಲುಗಳನ್ನು ಎದುರಿಸಲು ಸಾಕಷ್ಟು ಸಿದ್ಧತೆಗಳೂ ಶರವೇಗದಲ್ಲಾಗಬೇಕಾಗಿದೆ. ಕರೋನಾ ಮಹಾಮಾರಿಯಿಂದ ಮರಣದ ಸಂಖ್ಯೆ ಮಿತಿ ಮೀರುತ್ತಿದೆ. ಬದುಕಿದ್ದವರೂ ಚೈತನ್ಯ ಕಳೆದುಕೊಂಡು ಸತ್ತಂತೆ ಬದುಕುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಎಲ್ಲ ಸಾಮಾಗ್ರಿಗಳ ದರ ಕೊಳ್ಳಲು ಕೈ ಸುಡುತ್ತಿದೆ. ಲಸಿಕೆ ಸಿಗದೆ ಹಿರಿಯರ ಮೊರೆ ಬಾಡಿದೆ. ಆಕ್ಸಿಜನ್ ಬೆಡ್‌ಗಳ ಅಭಾವದಿಂದ ಜನರ ಜೀವ ಹಾರಿಹೋಗುತ್ತಿದೆ. ರೈತರಿಗೆ ಅವರ ಅಸಲಿನ ಹಣವೂ ಸಿಗುತ್ತಿಲ್ಲ. ವಲಸೆ ಕಾರ್ಮಿಕರ ಕೈ ಖಾಲಿ. ಆರ್ಥಿಕ ಸುಸ್ಥಿರತೆಯು ಜೊತೆ ಮಾನಸಿಕ ಸಧೃಡತೆಯೂ ಅನಿವಾರ್ಯವಾಗಬೇಕು. ಸೋಂಕಿನ ಕಳವಳ, ಕಳಕೊಂಡ ಭರವಸೆಗಳು, ಅನಿಶ್ಚಿತ ನಾಳೆಗಳು, ಸಾವು–ನೋವಿನ ಭಯ, ಮನಸ್ಸನ್ನು ಹಿಂಡುವ ದಿನಗಳಲ್ಲಿ ಬದುಕು ದುಸ್ತರ. ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಜಂಜಡದ ಬದುಕಿನ ಹೊರೆ ಸ್ವಲ್ಪ ಬದಿಗಿಟ್ಟು ಚಿಂತೆಯ ಚೀಲ ಚೆದುರಿಸಿ ಹಾಸ್ಯ ಲಾಸ್ಯದ ಅಲೆಗಳಲ್ಲಿ ಮನಸ್ಸನ್ನು ಆಸ್ವಾದಿಸಲು ಬಿಟ್ಟು ಸ್ವಲ್ಪ ನಗುವಿನ ನಗವಾಗಿಸೋಣ. ಬಾಳು ನಾಳೆ ಸರಿಯಾದೀತು ಎಂಬ ಆಶಾವಾದದ ನೆರಳಲ್ಲಿ ಭರವಸೆಯು ಬಲದಲ್ಲಿ ಬದಲಾಗೋಣ.

ನೋಡಿ ಇಲ್ಲಿ ಕೆಲವು ಮಕ್ಕಳ ಪೊಕ್ಕಟೆ ಪುರಾಣ

ಸಂಕ್ರ, ಅಜ್ಜಿ, ಸಹನಾ, ಚೀಂಕ್ರ, ವೀರ, ಗೋಕುಲ, ವೆಂಕ, ಮಂಜು ಗಣೇಶ.

ಸಂಕ್ರ – ಏಚುಟ್ ಶಾಲಿಗ್ ರಜೆ ಆರೂ ಒಂದ್ ನಮನೀ ಬ್ಯಾಜಾರ್ ಅಲ್ದನಾ. ಬೈಲಪತಿಗ್ ಆಡುಕ್ ಹೋಪಾ ಬತ್ಯಾನಾ, ಬರಿಬ್ಯಾಣದ್ ಹತ್ರ ಹೋಯ್ ಕ್ರಿಕೇಟ್ ಆಡುವನಾ?

ಗಣೇಶ – ಅಚ್ಚುಬ್ಯಾ ನಿನ್ಗ್, ಮಂಡಿ ಸಮ ಇಲ್ಯನಾ? ಎದಿಹೋಯ್ಲ್? ಈ ನಮುನಿ ರೋಗು ಹರಡತ್ ನಿನ್ಗ್ ಆಟುವಾ? "ಮನಿಯಂಗ್ ಇದ್ದಂವ್ ಮಹಾಸೂರ, ಹೊರಗ್ ಹೋದಂವ್ ಹರೋಹರ" ಅಂದ್ ಗಾದಿ ಕೇಣಿಲ್ಯಾ?" ಮೊನ್ನೆ ಪ್ಯಾಟೀಗ್ ಹೋಯ್ ಯಾಪಾರು ಹೈಲ್ ಆದ್ದೇ ಸಾಕ್.

ಸಂಕ್ರ – ಮೊನ್ನಿ ಎಂತಕ್ ವ್ಯಾಪಾರು ಹೈಲಾದ್? ಎಂತ ಕೈಕೋಚ್ ಮಾಡ್ರೆ?

ಗಣೇಶ – ನಾನ್ ಹೀಮಗೆ ಕಾಂಬೂ ಅಂದ್ ಭಾವನ್ ಸ್ಕೂಟ್ರ ತಕಾ ಪ್ಯಾಟಿಗ್ ಹೋಯ್ದೆ. ಪೋಲಿಸ್ರ್ ಅಲ್ ಅಡ್ಡ ಹಾಕ್ರ್ ಎಂತಕ್ ಬಂದ್ಯಾ ಅಂದ್ರ್. ನಾನ್ ಸುಳ್ಳಿಗಾರೂ ಮೆಡಿಕಲ್‌ಗೆ ಬಂದಿ ಅಂದ್ನ. ಚೀಟಿ ಎಲ್ಲಿತ್ ತೋರ್ಸ್ ಅಂದ್ರ. ನನ್ ಹತ್ರ ಎಂತದೂ ಇಲ್ಲಾ ಆಯಿತ್. ಅವ್ರಿಗೂ ಸುಳ್ಳ್ ಹೇಳ್ದ್ ಅಂದ್ ಗೊತ್ತಾದ್ದೇ ತಡ ನಾಲ್ಕ್ ಬಾರ್ಸಿ ಸ್ಕೂಟರ್ ತಕ್ಕಂಡ್ರ್. ಇಲ್ ಮನಿಯಂಗ್ ಅಕ್ಕ–ಭಾವ್ನಿಗ್ ಗುತ್ತಾಯಿ ಮತ್ತ್ ನಾಲ್ಕ್ ಬಾರ್ಸರ್. ಅದ್ರ್ ಮೇಲ್ ಪ್ಯಾಟಿ ಬದೀಗ್ ಇಣ್ಕಿ ಕಾಣಲ್ಯಾ. ಮನಿಯಂಗ್ ಕೂಕಂಡ್ ಬರೂದ್ ಓದುದ್.

ಸಂಕ್ರ – ಇವ್ನಿಗ್ ಮಳ್ಳಾ? ಶಾಲಿಯಂಗ್ ಮಾಸ್ತ್ರ, ಟೀಚರಿಗ್ ಇದೇ ಕೆಲ್ಸ. ಅವ್ರಿಗ್ ಬದ್ಕಿಲ್ಲ, ಇವ್ನಿಗ್ ಹೋಕಿಲ್ಲ. ನಂಗಂತೂ ಲಾಯ್ಕ್ ಆಯ್ತ್ ಲಾಕ್‌ಡೌನ್. ನೋ ಸಂಡೇ, ನೋ ಮಂಡೇ. ಉಂಡ್ಕಂಡೆ.....ಮಲ್ಕಂಡೆ...

ಅಜ್ಜಿ – ಹೌದ್ ಮಕ್ಕಳಾ, ಹೊರ್ಗೆ ಹೋಯ್ಬೇಡಿ. ಆರೂ ಕಾಣದ್ ವೈರಾಣು ನಮ್ಮನ್ ಹೆದ್ರಿಸಿದ್ ಹಾಂಗೆ. ಕಣ್ಣೀಗ್ ಕಾಣದಿದ್ದ್ ಭಗವಂತ್ನಿಗೂ ನಮ್ ಕಾಪಾಡು ಶಕ್ತಿ ಇರತ್ತ್.

ಮಂಜು – ಅಜ್ಜಿಯಾ ಈ ಗೋಕುಲ್ ಇದ್ನಲೇ ಹೊರ್ಗ್ ಹ್ವಾಯ್ ಬ್ಯಾಡಾ ಅಂದ್ರೂ ಸಾವ್ರಸರ್ತಿ ಹೇಳ್ರೂ ಹೊರ್ಬದಿ ನೀಕಿ ನೀಕಿ ಮ್ಯಾಳಿ ಕೊಕ್ಕಾನಕ್ಕಿ ಮಾಡ್ಕಂಡಿದ ಮರ್ರೆ.

ಸಂಕ್ರ – ನೀ ಹೇಳ್ಕಿತ್ ಬದ್ಕು ಆಸಿ ಇದ್ರೆ ತೆಪ್ಗೆ ಮನಿಯಂಗ್ ಐಕೋ. ನೀಕಿ ನೀಕಿ ಕಾಂಬುಕೆ ಬಂದದ್ದ್ ಕರೀನಾ ಅಲ್ದಾ, ಕರೋನಾ ಅಂದ್ ಹೇಳಾ.

ಸಹನಾ – ನೀವೆಲ್ಲಾ ಇಲ್ ಇದ್ರ್ಯಾ? ನಾನ್ ಹೆಲ್ಸಿನ್ ಹಣ್ಣ್ ಕುರ್ದ್ ಬಚ್ಚಿ ಬಂದ್ನೆ.

ಎಲ್ಲರೂ – ನಾವೆಲ್ಲಾ ಬತ್ತೋ ಹಂಗಾರೆ, ದಾನಿ ಹೆಕ್ಕುಕೆ, ಸೊಳಿ ತಿಂಬುಕೆ.....ಬಪ್ಪದಾ?

ವೆಂಕ – ಇವ್ನಿಗ್ ಮೊನ್ನಿ ಸಿಕ್ಕದ್ ಸೊಳಿ ಸಾಕಾಯಿಲ್ಲೆ ಅಂಬಂಗೆ.

ವೀರ – ಎಂತ ಆಯ್ತ್? ದಾನಿ ಹೆಕ್ಕು ಕೆಲ್ಸವೇ ಸಮ ಅವ್ನಿಗ್.

ಮಂಜು – ಇವ್ ಮೊನ್ನಿ ಹೊಳಿಬದಿಗ್ ಹೋಯಿನ್ ಗಾಳು ಹಾಕ್‌ತಿಪ್ಪತಿಗೆ ಕಿಸಿಯಾಗಿದ್ ಮೊಬೈಲ್ ಗುಳುಂ ಅಂದ್ ನೀರಿಗ್ ಬಿತ್ತಾ. ಚಪ್ಪಿ ಮುಖ ಮಾಡ್ಕಂಡ್ ಮನಿಬಂದ್ನಾ, ಅಪ್ಪ ಸಮಾ ಸೊಳಿ ಕೊಟ್ರಂಬಲ್ಯೆ. ಈಗ ಇವ ದಾನಿ ಹೆಕ್ಕುಕೆ ಸೈಯಾ. ಮತ್ ಎಂತ ಗೆಣ್ಗ್ ಬೇಸೂಕಿಲ್ಲೆ ಇಲ್.

ಸಹನಾ – ನೀವ್ ಬಂದ್ರೂ ಯಾರಿಗೂ ಸೊಳಿ ಕೊಡುಕಾತಿಲ್ಲೆ. ಹೆಲ್‌ಸಿನ್ ಹಣ್ಣ್ ಸೋಶಿಯಲ್ ಡಿಸ್ಟನ್ಸ್ ಮಾಡಿತಾ ಕಾಂತ್. ತಲಿಗೊಂದ್ ಸೊಳಿ ಬುಡಕ್ ಒಂದ್ ಸೊಳಿ. ಎರ್ಡೆ ಸೊಳಿ ಇಡೀ ಹಣ್ಣಗ್.

ಎಲ್ಲರೂ – ಹಾ..... ಹಾ..... ಹಾ..... ಹಾ..... ಹಾ..... "ಈಂಬನ್" ಹಣ್ಣ್ ಸಮಾ ತಿಂಬ್ ಹಣ್ಣ್ ಅಂದ್ಕಂಡಿದೆ.

ವೆಂಕ – ಸೊಳಿ ಕಥಿ ಸಾಯ್ಲಿ ನೀನೇ ನುಂಗ್, ನಿನ್ನ್ ಅಕ್ಕನ್ ಅಂಗ್ಡಿ ಇತ್ತಲೆ ಬ್ಯೂಟಿ ಪಾರ್ಲರ್ ಈಗ ಹ್ವಾತಿಲ್ಯಾ?

ಸಹನಾ – ಅಕ್ಕನ್ ಸುದ್ದಿ ನಿಂಗೆಂತಕಾ? ನಿನ್ ಕರಿಸೊಡ್ಡ್ ಮಾಳ್‌ಬೆಕ್ಕ್ ಕಂಡಂಗಿತ್ತ್. ನಿಂಗೆಂತಕೆ ಪಾರ್ಲರ್ ಸುದ್ದಿ? ನಿಂಗ್ ಒಲಿ ಬದಿ ಮಸಿ ಕೆಂಡು ಉದ್ರೂ ಉದ್ಲಕ್.

ವೆಂಕ – ಅಲ್ದೆ ಅಚಿಮನಿ ದೀಪಾ, ನಡುಮನಿ ನಲಿತಾ, ಬದೀ ಮನಿ ಬೀರಮ್ಮ ಎಲ್ಲಾ ಬಂದ್ ನಮ್ಮನಿ ಹೈತ್ ಕಂಡಿರಪ್ಪಾ. ಅವ್ರ್ ಗುರ್ತ್ ಸಿಕ್ಕುದಿಲ್ಲೆ ಈಗ. ಎಲ್ಲಾ ಕರೀ ಭೂತು ಕಂಡಾಂಗ್ ಆಯ್ರಲೆ. ಹಗ್ಲ್ ಆರೂ ಕಂಡ್ರೆ ಅಡ್ಡಿಲ್ಲೆ. ಆರ್ ರಾತ್ರಿ ಯಾರಾರೂ ಕಂಡ್ರೆ ಪಂಜುರ್ಲಿನೇ ಆಳ್ಸಕ್ ಯಬ್ಯಾ.

ವೀರ – ಈಗ ಇವ್ಳ್ ಅಕ್ಕ ಅವ್ರ್ ಮನಿ ಮೊಲಕ್ಕೆ ಮಂಡಿ ಬಾಚಿ, ಕೋಳಿಗ್ ಕುಂಕುಮ ಹಾಕಿ, ಬೆಕ್ಕಿಗ್ ಬಾಸಿಂಗು ಕಟ್ಟಿ ಸಿಂಗಾರು ಮಾಡುದಂಬ್ರ. ಪಾಪ್ರ್ ಮಾಡ್ದ್ ಕೈ ಸುಮ್ನೆ ಕೂಕಂಬುಕ್ ಆತ್ತಾ?

ಸಹನಾ – ಏಯ್ ನನ್ನ್ ಅಕ್ಕನ್ ಸುದ್ದಿ ಬ್ಯಾಡಾ ಹೆಕ್ಕತಿಂಬನೇ. ಚಪ್ಪಿ ಕೊಟ್ಟಿ ಕೊಡ್ಕರ್ ಹ್ಯಾಂಗ್ ಆತ್ ಗುಯ್ಯಿತಾ? ಎದಿಸೀಳ್ರೆ ನಾಕ್ ಅಕ್ಸರ್ ಬತ್ತಿಲ್ಲೆ. ಅಧಿಕ್ದ್ ಮಾತಾಡ್ತಾ ಇಂವಾ?

ಅಜ್ಜಿ – ಹಣಿಬರಹ ನಡೀತ್ತೇ ಹೊರ್ತು ನಾವ್ ಆಸಿಪಟ್ಟಂಗ್ ಯಾವ್ದೂ ಆತಿಲ್ಯಾ.

ಮಂಜು – ಹಣಿಬರು ಅಳ್ಸುಕೇ ಯಾವ್ ವೈಟ್ನರ್ ಕಂಡ್ ಹಿಡಿಲ್ಲೆ ಇನ್ನೂ. ಇದ್ದೀರ್ ನಂದ್ ಹಣಿ ಸ್ಲಲ್ಪ ಈ ಸಹನಾ ಹೆಣ್ಣಿನ್ ಹಣಿ ಸ್ವಲ್ಪ ಬದ್ಲಾಯ್ಸಲಕ್ಕಿತ್.

ಅಜ್ಜಿ – ಬದಕ್ ಒಂದ್ ರಂಗೋಲಿ ಕಂಡಂಗೆ. ಒಂದ್ ಹುಂಡ್ ಆಚಿ ಈಚಿ ಆರ್ರೂ ಬದ್ಕೆ ಬದ್ಲಾತ್ ಗೊತ್ತಿತ್ತಾ ಗಡಾ.

ವೆಂಕ – ಹೌದಜ್ಜಿಯಾ. ನಿನ್ ಮಾತ್ ಕೇಂಡ್ರ ಏನೋ ಒಂದ್ ನೆನ್ಪಾಯ್ತೆ.

ಮಂಜು – ಹೌದ್ ಇವ್ನಿಗ್ ಈ ಸಾರಿ ಯಾವ್ದ್ರಗೆ ಎಷ್ಟ್ ಮಾರ್ಕ್ ಯಾವ್ ವಾರ, ಯಾವ್ ತಿಂಗ್ಳ್, ಯಾರ್ ಹತ್ರ ಸಾಲು ತಕ್ಕಂಡಿದೆ? ಇದ್ ಎಲ್ಲಾ ನೆನ್ಪ್ ಆತ್ತಿಲ್ಲೆ. ಈಗ ಎಂತ್ ಮನಿಹಾಳ್ ಸಿನ್ಮಾದ್ ಕಥಿ ನೆನ್ಪಾಯ್ತಾ?

ವೆಂಕ – ಸುದೀಪ್ ಇದ್ನಲೆ ಅವ್ನ್ ನಡ್ಸೋ ರಿಯಾಲಿಟಿ ಶೋಗೂ (ಬಿಗ್‌ಬಾಸ್) ಈಗ ದೇವ್ರ್ ನಡ್ಸೋ "ರೀಯಲ್ ಲೈಫ್" ಈ ಲಾಕ್‌ಡೌನ್ ಶೋಗೂ ವ್ಯತ್ಯಾಸ ಎಂತ ಇಲ್ಯೆ ಅಲ್ದಾ?

ಸಹನಾ – ಇದ್ರಂಗ್ ಹೆಣದ್ ರಾಶಿಯೇ



ಬಿದ್ದಿತಲೆ. ಟಿವಿಯಂಗೆ ಪೇಪರಂಗೆ, ಜನ್ರ್ ಬಾಯ್ ತುಂಬಾ ಇದೇ ಸುದ್ದಿ. ನಂಗಂತೂ ಹೆದ್ರಿಕೆ ಹತ್ತಿ ನಿದ್ರಿಯೇ ಬತ್ತಿಲ್ಲೆ.

ಅಜ್ಜಿ – ನೀನ್ ಅದ್ ಖಾಯ್ಲಿ ಬರ್ದಿದ್ದಂಗ್ ಲಸ್ಕಿ ಕೊಡ್ತ್ರಂಬ್ರಲೆ ತಕ್ಕಂಬುಕ್ ಏನ್ ನಿಂಗ್ ದಾಢಿಯಾ?

ಸಂಕ್ರ – ನೀನ್ ಯಾವ್ದ್ ತಕ್ಕಂಡದ್ ಅಜ್ಜಿಯಾ? ಕೋವ್ಯಾಕ್ಸಿನ್ ಕೋವಿಶೀಲ್ಡಾ? ಹಂಬ್ಲ್ ಬಚ್ಚಕಂಡಿದ್ಯಾ?

ಅಜ್ಜಿ – ಹಾ ಹಂಬ್ಲ ಬಚ್ಚಕಂಡ್ ಅದ್ ಏನ್ ಆಧಾರ್‌ಕಾರ್ಡ್ ನಂಬರಾ ಅಲ್ಲಾ ಜಾಗದ್ ಸರ್ಟಿನಂಬ್ರವಾ. ಬೇಕಾರ್ ಅವ್ರೆ ಬಂದ್ ಹೇಳಿ ಕೊಡ್ತರ್. ನಾನೂ ನನ್ ತಂಗಿ ಇಬ್ರೂ ಹೋಯ್ ಇಬ್ರಿಗೂ ಇದೆಲ್ಲಾ ಗೊತ್ತಿಲ್ಯಾ. ಅವ್ರ್ ಹೇಳಿರಾ? ಹೋದ್ ಕೂಡ್ಲೇ ರಟ್ಟಿಗ್ ಸುಂಯ್ ಅಂದ್ ಸುರ್ದ್ರಲೆ?.

ಸಂಕ್ರ – ಕೋವ್ಯಾಕ್ಸಿಕ್ ಹುಡ್ಗನಿಗೂ ಕೋವೀಶೀಲ್ಡ್ ಹುಡ್ಗೀಗೂ ನೆಂಟಸ್ಕಿಕೆ ಆತಿಲ್ಲ ಅಂಬ್ರ. ಅವ್ ಎರಡ್ರದ್ದೂ ಜಾತ್ಕೂ ಬ್ಯಾರೇ ಬ್ಯಾರೇ ಅಂಬ್ರ.

ಅಜ್ಜಿ – ಮೊದಲ್ ಯಾವ್ದ್ ತಕ್ಕಂಡದ್ ಅದ್ನೇ ಎರಡ್ನೇ ಸಾರಿ ತಕಣ್ಕ್ ಅಂದ್ ಬಲ್ವಾಡಿ ಟೀಚರ್ತಿ ಹೇಳೀದಾಳ್. ಏನೋ ಆಯುಷ್ಯ ಇದ್ದಾಗಾರೆ ಉಳ್ಕಂತ್ರ ಅಷ್ಟೇ ಗಡಾ. ಯಮ ಬಂದ್ ಕರುವತ್ತಿಗೆ ಹೋಯ್ದಿರೆ ಆತ್ತಾ? ಕ್ವಾಣದ್ ಮ್ಯಾಲ ಬತ್ತ್ ಅಂದ್ ನನ್ನ್ ದೊಡ್ಡಬ್ಬಿ ಸಾಯುವತ್ತಿಗೆ ತೋರಿತ್ ಅಂದ್ ಹೇಳ್ತಿದ್ದಳ್. ಸುಳ್ಳೋ ಸತ್ಯವೋ ದೇವ್ರಿಗ್ ಗೊತ್ತ್.

ಸಂಕ್ರ – ಈಗ ಯಮ ಕ್ವಾಣದ್ ಮ್ಯಾಲ್ ಬತ್ತಿಲ್ಲ ಅಂಬ್ರ.

ಮಂಜು – ಮತ್ ಎಂತ್ರದ ಮ್ಯಾಲ್ ಬತ್ತಾ ಅಂಬ್ರಾ. ಅಂವ್ ನಿನ್ ನೆರ್ಮನಿಯಾ? ಫೋನ್ ಮಾಡಿನಾ ಕಾಂತ್. ಯಬ್ಯಾ ಗುಳ್ಗಿ ಬಿಡುಕೆ ಒನ್ ನಂಬರ್ ಇಂವಾ.

ಸಂಕ್ರ – ಯಮ್ನಿಗೆ ವರ್ಕ್ ಫ್ರಂ ಹೋಂ ಅಲ್ದಾ. ಮತ್ ಮಜಾಕ್ ಮಾಡ್ ಹೊರ್ಗ್ ಬಪ್ಪಕಿಲ್ಯಲೇ ಮತ್ತ್ ಕ್ವಾಣ ಎಂತಕಾ?

ಕೈಯಾಳ್ ಬಳ್ಳಿಯೂ ಇಲ್ಲ ಕುತ್ತಿಗೀಗ್ ನೇಣ್ ಬಿಗುಕೇ. ಮಿಷನ್‌ಗನ್ ಇಟ್ಟಕಂಡಿದ್ ಅಂಬ್ರಪ್ಪ. ಅಲ್ಲೇ ಕೂಕಂಡ್ ಸೂಂಯ್ ಸೂಂಯ್ ಅಂದ್ ಒಂದೇ ಸಾರಿ ನೂರ್ ಜನ್ರ ಪ್ರಾಣೂ ಪಟ್ – ಪಟ್ ಅಂದ್ ಹೊಡ್ಕಂಡ್ ಜೀವ್ ತಕಾ ಹೋತಾ ಅಂಬ್ರಲೆ. ಹಾಗಂದ್ ವರ್ತಮಾನು.

ವೀರ – ಹಾಂಗಾ, ಕ್ವಾಣಕ್ ಹಾಕು ಹುಲ್, ಕಾಳ್ ಎರಡೂ ಉಳೀತಲೆ.

ಮಂಜು – ಹಂಗಾರ್ ಚಿತ್ರಗುಪ್ತನ್ ಪೋಸ್ಟ್ ಖಾಲಿ ಇತ್ತಾ ಕಾಂತ್.

ಸಂಕ್ರ – ಎಂತ ಒಂದ್ ಅರ್ಜಿ ಹಾಕುವಾ ಅಂದ್ದೇಳಿ ಇತ್ತಾ . ಪುರ್ಸೋತ್ ಇದ್ರೆ ಹೋಗಾ, ಅದ್ಕಾರೂ ಎಸ್‌ಎಸ್‌ಎಲ್‌ಸಿ ಪಾಸ್ ಆಯ್ಕಲೆ. ಓದ್ ಸಮಾ ಮೊದ್ಲ.

ಗೋಕುಲ – ಚಿತ್ರಗುಪ್ತನಿಗೆ ಕೊಡುಕ್ ಬಜೆಟ್ಟಿನಲ್ ಪೈಸು ಇಲ್ಲ ಅಂಬ್ರ. ಅದ್ಕೆ ಅವ್ರಿನ್ ಅಲ್ ಅಡ್ಗಿಮನೀಗ್ ಹಾಕಿರಂಬ್ರ. ಮಧ್ಯಾಹ್ನ ಮಾತ್ರ ಸಾಯುವವರ್ ಪಟ್ಟಿ ಮಾಡಿ ಯಮನ್ ಕಂಪ್ಯೂಟರ್ ಮೇಲ್ ಮಾಡ್ತ ಅಂದ್ ಸುದ್ದಿ ಯಪಾ.

ವೀರ – ಎಂತಕೆ ಮಾತ್ರಿ ತಕಂತಿಲ್ಯಾ ಈಗ? ದಿನಕ್ ಅರ್ಧು ತಕಣಾ.

ರಮೇಶ – ನೀವ್ ಎಲ್ ಇಲ್ ಹೊಕ್ಕಡಿರ್ಯಾ? ನಂಗ್ ಅಂತೂ ಮನಿಯಂಗ್ ಇದ್ದ್ ಮಂಡಿಕೆಟ್ ಮರ್ಲ ಹಿಡ್ದ್ ಹಂಗ್ ಆಯ್ತ್.

ರಮೇಶ – ನಿಂಗ್ ಕುಶಾಲ್. ನಮ್ ಮನಿಯಂಗ್ ಅಪ್ಪ – ಅಬ್ಬಿ ಜಗ್ಳು ಒಂದ್ ಬದಿಯಂಗೆ. ಓದ್ನಾ ಬರದ್ನಾ ಅಂದ್ ಶಾಲಿಯರ್ದ್ ರಗ್ಳಿ. ಹೊರ್ಗೆ ಹ್ವಾಪಾ ಪ್ಯಾಟಿ ಸುತ್ತಿ ಆಟು ಆಡ್ವಾ ಅಂದ್ರೆ ಯಬ್ಯಾ ಪೋಲೀಸ್ನೋರ್ ಪುಕ್ಕಿ ಮ್ಯಾಲ್ ಬಾರ್ಸ ಹಬ್ಬು ಕಾಂತ್ರ್ಯಾ. ಬಡ್ಗಿ ಮೇಲ್ ಬಡ್ಗಿ.

ಅಜ್ಜಿ – ಅಪ್ಪ – ಅಬ್ಬಿ ಜಗ್ಳು ಎಂತದ್? ನಿನ್ ದೆಸಿಯಿಂದಾ?

ರಮೇಶ – ಅಲ್ಲಪ್ಪಾ ಮೊನ್ನಿ ಅಬ್ಬಿ ಅವ್ಳ್ ಅಪ್ಪಕ್ "ಇದೊಂದ್ ಮಾರಿ ಬಂದ್ ಕೂತ್ ಎಷ್ಟ್ ದಿನು ಆಯ್ತ್. ಏಗಳಿಕ್ ಇದ್ ಹ್ವಾಪ್ಪೋ ಏನೋ ದರಿದ್ರದ್" ಅಂದಳಂಬ್ರ.

ಅಜ್ಜಿ – ಅದ್ಕೆಂತಾ ಆಯ್ತಾ. ಕೆಲ್ಸ ಮಾಡಿ ಮಾಡಿ ಸಾಕಾಯ್ತ್ ಬೈದಿಪ್ಪಳ್. ನುಂಗುಕ್ ನೀವೆಲ್ಲಾ ಇದ್ರಿ. ಕೆಲ್ಸಕ್ ಅವ್ಳೊಟ್ಟಿ ಅಲ್ವಾ. ಈ ಕಾಲ್ ಗಂಡಸ್ರ್ ತಿಂದ್ ತಿಂದ್ ಹೊಟ್ಟಿ ಬೆಳ್ಸಕ್ಕಂಡ್ ಹೆಂಗ್ಸರ ನುಂಗುಕ್ ಮಾಡಿ ಮಾಡಿ ಮೂಳಿ, ರಟ್ಟಿ, ಮೈ ಕೈಯೆಲ್ಲಾ ಲಡ್ಡ್ ಮಾಡ್ಕಂಡ್.

ಸಂಕ್ರ – ವಿಷ್ಯ ಅದಲ್ದೆ ಅಜ್ಜಾ. ನನ್ ಅಬ್ಬಿ ಈ ಕೊರೋನಾ ಕಾಯ್ಲೀಗ್ ಹೇಳ್ದೇ. ಅಪ್ಪ ಹೊಟ್ಲ್ ಬಾಗ್ಲ್ ಹಾಕಿ ಸುಮಾರು ದಿನು ಆಯ್ತ್. ಮನಿಯಂಗ್ ಕೂತಿನಲೇ, ಇದ್ನ್ ನಂಗೆ ಹೇಳ್ದ್ ಅಂದ್ ತಿಳ್ಕಂಡ್ ಅಬ್ಬಿಗ್ ಎರ್ಡ್ ಬಾರ್ಸರ್. ಕಡೀಕ್ ಅಬ್ಬಿಗ್ ದವ್ಡಿ ಉಬ್ಬರ್ಸಿ ಹಲ್ ಕಳ್ಚಿ ಹೋಯ್ ಯಬ್ಯಾ ರಾಮಾಯ್ಣು ಮರಾಯ್ತಿ.

ವೀರ – ಕ್ವಡಿಗೆ ಜವ್ವಾಸ್ ಕಥಿ ಎಂತದ್.

ರಮೇಶ – ಈಗ ಅಬ್ಬಿಗ್ ಸಿಟ್ ಬಂದ್ ಅಡ್ಗಿ ಬಂದ್. ಅಪ್ಪಂದೇ ಎಲ್ಲಾ. ಮೆಣ್ಸಿನ್ ಕೋಡ್ ಪಾಯ್ಸು. ಬೆಳ್ಳುಳ್ಳಿ ಬಜ್ಜಿ, ಬೆಂಡಿಕೋಡ್ ಹಸಿ, ಅನ್ನುಚರು ಉಂಬು ಯಾಪಾರು ಅಲ್ದೆ.

ವೀರ – ಶಾಲಿಬದಿ ಎಂತ ರಗ್ಳಿ ಮರಾಯ?

ರಮೇಶ – ಅದ್ ಮುಗುದಲ್ಲಾ. ಕರೋನಾ ಆರೂ ಕಮ್ಮಿ ಅತ್ತೋ ಏನೋ. ಆರ್ರೆ ಮೊಬೈಲ್ ಪಾಠು ಮುಗುದೇ ಇಲ್ಯಾ? ಹಗ್ಲ್ ಅಂದಿಲ್ಲ ರಾತ್ರಿ ಅಂದಿಲ್ಲ. ಚೀಟರ್ದ್ ಫೋನ್ ಬರ್ದ್ಯಾ? ಓದ್ಯಾ ? ಎಂದ್ ಮಣ ಮಣ ಮಂತ್ರು ಇಡೀ ದಿನ. ಕರ್ಕೇರಿ. ಸುದ್ದಿಸಾಕ್. ಎಲ್ಲಾರೂ ಓಡಿ ಹೋಪಾ ಅಂದ್ರ ಬಸ್ಸೂ ಇಲ್ಯಲೇ... ಸಾಕ್ ಸಾಕ್ ಆಯ್ತ್.

ಗೋಕುಲ –ನಾನಂತೂ ಶಾಲಿ ಹಂಬ್ಲಿ ಮಾಡ್ಕಂತಿಲ್ಯೆ. ಫೋನ್ ಬಂದ್ರೆ ಸ್ವಚ್ ಆಫ್ ಮಾಡ್ಕಂತೆ. ಇನ್ನೋ ಒಂದ್ ತಿಂಗ್ಳ್ ಶಾಲಿಗ್ ರಜಿ ಆರೂ ಸಂತೋಷು. ಬೇಜಾರಿಲ್ಲ. ದೇಶದ ಆರೋಗ್ಯ ಮುಖ್ಯ ಅಲ್ದನಾ?

ವೆಂಕ – ಪುನಃ ಶಾಲಿ ಶುರು ಆದ್ರ ಶಾಲಿ ದಾರಿ ಸಿಕ್ಕತ್ತಾ ನಿಂಗೆ? ಪಾಠು, ಟೀಚರು ಎಲ್ಲಾ ಹ್ಯಾಂಗೂ ನೆನ್ಪ್ ಹ್ವಾತ್.

ಗೋಕುಲ – ಇಂವ್ ಒಬ್ಬ. ಗೂಗಲ್ ಮ್ಯಾಪ್ ಹೈಕಂಡ್ ಶಾಲಿ ಹುಡ್ಕ ಹೋರ್ ಆಯ್ತು? ಮಂಡಿ ಬಿಸಿ ಮಾಡ್ಕಂಬ್ಕೆ ಹೋಯ್‌ಬ್ಯಾಡ.

ವೀರ – ಮೊನ್ನಿ ನಮ್ ಅಪ್ಪಯ್ನಿಗೆ ಶಾಲಿಂದ್ ಫೋನ್ ಬಂತ್. ಅಪ್ಪಯ್ಯ ಪರಮಾತ್ನ ಒಳಗ್ ಸೇರ್ಸಿರ್ ಅಕಾ, ಆಚಿ ಬದೀಮದ್ ನೀವ್ಯಾರ್? ವೀರನ ತಂದೆಯಾ? ಅಂದ್ ಟೀಚರ್ ರಾಗ ಮಾಡಿ ಕೇಂಡ್ರಂಬ್ರ. ಅದ್ಕೆ ಅಪ್ಪಯ್ಯಾ ನಿಮ್ಗ್ ಡೌಟ್ ಇತ್ತಾ? ಅಂವ್ ನನ್ ಸ್ವಂತ ಮಗ್ನೆ. ನಾನೇ ಅವ್ನ್ ಅಪ್ಪಾ. ಬಾಡ್ಗಿ ಮಗ ಅಂದ್ ಮಾಡಿರ್ಯಾ ಅಂದ್ರಂಬ್ರ. ಅದ್ಕೆ ಟೀಚರ್ ಅಂವ್ ಬರುಕ್ ಕಳ್ಸದ್ ಬರ್ದ್ ಹಾಕುದಿಲ್ಲೆ. ಅಂವ್ ಹೀಂಗ್ ಮಾಡ್ರೆ ಫೈಲ್ ಆತಾ ಕಾಣೆ ಅಂದ್ರಂಬ್ರ್.

ಅದ್ಕೆ ಅಪ್ಪಯ್ಯ, ಪೈಲ್ ಆರ್ರೆ ತೌಡ್ ಗಾಳ್ಸಕ್ ಹೋತಾ ಪೋನ್ ಬಚ್ಚಿ, ಇವ್ಕೆ ಹೊತ್ ಗೊತ್ತ್ ಇಲ್ಲೆ. ಇವಂದ್ ಒಂದ್ ಕೋಳಿಪಡಿ, ಕರ್ಕರಿ ಅಂದ್ ಸಮಾ ಬೈದ್ರಂಬ್ರ್, ಅದ್ರ್ ಮ್ಯಾಲ್ ಒಂದ್ ಫೋನೂ ಇಲ್ಲಾ ಕಾಣ್.

ಅಜ್ಜಿ – ಗ್ವಡಾ ಹಾಂಗ್ ಮಾಡುಕಾಗ್ದಾ. ಗುರ್ ಹಿರಿಯರ್ಗೆ ಮರ್ಯಾದಿ ಕೊಡ್ಕ್. ಕಲೀದೀರೆ ಗನಾ ಕೆಲ್ಸ ಸಿಕ್ಕತ್ತಾ ಕಡೀಕ್ ಬೇಡುಕ್ ಹ್ವಾತಿಯನಾ? ಸಮಾ ಓದ್ಕ್. ಬರೀಕ್ಕಾ.

ಮಹೇಶ್ – "ಅಜ್ಜಿಯಾ ನಾಳಿನ್ ಕತಿ ನಾರಾಯ್ಣ್ ಬಲ್ಲಾ" ಅಂದ್ ನೀನೇ ಹೇಳ್ತಾ ತಿರ್ಗತಿಯಲ್ಲೆ. ಈಗ ಅದೇ ಕರೋನಾ ಖಾಯ್ಲಿ ಬಂದ್ "ಯಾರ್ ಕಥಿ ಯಂತದೋ" ನಾನ್ ಮೀನ್ ತಪ್ಪುಕ್ ಅಂದ್ ಬಂದಾನ್ ಇಲ್ ಈ ಎಲ್ಲಾ ಮರ್ಲ್ ಮಂಡಿಯವ್ ಹತ್ರ ಪೊಕ್ಕಟಿ ಪುರಕಥಿ ಕೇಳ್ತಾ ಕೆಲಸ್ ಹಂಬ್ಲ್ ಹೋಯ್ತ್ ನಾ ಹೋತೆ.....

ಸಹನಾ – ಏಚುಟ್ ಮಾಸ್ಕ್ ಹೈಕಾ ಹೋಗ್. ಬಂದ್ ಮ್ಯಾಲೆ ಸ್ಯಾನಿಟೈಸರ್ ಕೈ ತೋಳ್ಕ. ಹಂಬ್ಲ್ ಹೋಯ್ದೆ.

ಮಹೇಶ್ – ನಂಗ್ ಅಷ್ಟ್ ಗೊತ್ತಿಲ್ಯಾ ಹೆಣಾ? ಮಾಸ್ಕ್ ಹೈಕಂಡ್ ಬಂದ್ ಮೀಸಿ ಕೂದ್ಲೆಲ್ಲಾ ಉದ್ರಿ ಉದ್ರಿ ಹೋತ್ತಲೇ......ಕೈ ತೊಳ್ಕಂಡ್ ತೊಳ್ಕಂಡ್ ಅಂಗೈಯೆಲ್ಲಾ ಬಚ್ಚಿ ಹೋಯ್.....ಯಬ್ಯಾ ಉರಿ ಉರಿ...

ಅಜ್ಜಿ – ಹಂಗಾರ್ ಎಲ್ಲಾ ಮನಿಸೇರ್ಕಣಿ. ಮಳಿ ಬತ್ ಅಂಬಗಿತ್ತ್. ಆಡುಕ್ ತಿರ್ಗುಕೇ ಬಳೂಕೂ ದಿನು ಇದಲ್ಲ ಅಕಾ. ನಾಳಿ ನಮ್ದ್ ಅಲ್ಲ ಎಂಬ್ ಕಾಲ ಇದ್ದೀತ್. ಈಗ ಈ ಗಳ್ಗಿಯೂ ನಮ್ದ್ ಅಲ್ಲ ಎಂಬ ಕಾಲ ಬಂದೀತ್.



ಸುಮಿತ್ರಾ ಐತಾಳ್